

# ಅರ್ಚಕ ವೃತ್ತಿ ಪ್ರಜಾಪ್ರಭುತ್ವೀಕರಣ

**ಭಾ**ರತೀಯ ಸಮಾಜದಲ್ಲಿ ಜಾತಿಯ ಆಘಾತ ಬಲುಘೋರವಾದುದು. ಅಲ್ಲದೆ, ಇಲ್ಲಿ ದೇವರು ಮತ್ತು ಧರ್ಮದ ಭಯ ಹುಟ್ಟಿಸಿ, ಭಾರತೀಯ ಸಮಾಜದಲ್ಲಿ ಅನೈಕ್ಯವನ್ನು ಉಳಿಸಿಕೊಂಡು ಬರಲಾಗಿದೆ.

ದೇವರು ಮತ್ತು ಭಕ್ತರ ಮಧ್ಯೆ ಅರ್ಚಕ ಎಂಬವರೊಬ್ಬರು ಇರುವುದನ್ನು ನಮ್ಮ ಸಮಾಜದಲ್ಲಿ ಒಪ್ಪಲಾಗಿದೆ. ಇದರ ಔಚಿತ್ಯವನ್ನು ಬೇರೆ ಕಡೆ ಚರ್ಚೆ ಮಾಡಬಹುದು. ಈಗಿನ ವಿಷಯ ಎಂದರೆ, ಅರ್ಚಕರು ಒಂದು ಜಾತಿಗೆ ಸೇರಿದವರಷ್ಟೇ ಇರಬೇಕೇಕೆ? ಎಂಬುದು.

ಶತಮಾನಗಳಿಂದ ಅರ್ಚಕ ವೃತ್ತಿಯು ಪ್ರಧಾನವಾಗಿ ಬ್ರಾಹ್ಮಣ ಜಾತಿಯವರಿಗೆ ಸೇರಿದ್ದಾಗಿದೆ. ತಾವು ಶ್ರೇಷ್ಠರು ಎಂದೂ ಇವರು ನಂಬಿಸಿಕೊಂಡು, ಕಳೆದ ಜನ್ಮ, ಪಾಪ, ನರಕ, ಹಣೆಬರಹ ಇತ್ಯಾದಿಗಳನ್ನು ಬಹುಜನರ ಮೇಲೆ ಹೇರಿಕೊಂಡು ಬರಲಾಗಿದೆ. ವಿದ್ಯೆಯ, ಚಿಂತನೆ ಮಾಡುವ ಹಕ್ಕೇ ಬಹುಜನರಿಗೆ ಇಲ್ಲದಿದ್ದಾಗ, ಅವರು ಇವುಗಳನ್ನು ನಂಬಿಕೊಂಡು, ಇವುಗಳಿಗೆ ಭಯಪಟ್ಟು ಬದುಕು ನಡೆಸಿಕೊಂಡು ಬಂದಿರುವುದೂ ಕಾಣುತ್ತದೆ.

ಒಟ್ಟಾರೆ, ಆದದ್ದೇನು? ಪುರೋಹಿತಶಾಹಿ ಕೊಬ್ಬಿತು; ಜನರನ್ನು ಅಜ್ಞಾನದಲ್ಲಿ ಇಟ್ಟಿತು. ಇಡೀ ಸಮಾಜ ಹಿಂದೆ ಉಳಿಯಿತು. ಶತಮಾನಗಳ ಕಾಲ ಶೋಷಣೆ ಮುಂದುವರೆಯಿತು.

ಮಂದಿರಗಳು ಲಕ್ಷಾಂತರ ಇವೆ. ಆದರೆ, ವ್ಯವಸ್ಥಿತವಾಗಿ ಭಕ್ತರನ್ನು ಆಕರ್ಷಿಸುತ್ತಿರುವ ಮಂದಿರಗಳು ಸಾವಿರಾರು. ಇವುಗಳ ಪೈಕಿ 90%ರಷ್ಟು ಮಂದಿರಗಳು ಸರ್ಕಾರದ ಅಧೀನದಲ್ಲಿವೆ. ಇವುಗಳ ಆದಾಯ ಪರಿಗಣಿಸಿ, ಇವುಗಳನ್ನು ಎ, ಬಿ, ಸಿ ಎಂದು ವರ್ಗೀಕರಿಸಲಾಗಿದೆ. 10%ರಷ್ಟು ಖಾಸಗಿ ಮಂದಿರಗಳು. ಇವುಗಳ ಮೇಲೆ ಸರ್ಕಾರದ ನಿಯಂತ್ರಣ ಇಲ್ಲ. ಎಲ್ಲಾ ಮಂದಿರಗಳ ಉಸ್ತುವಾರಿ ನೋಡಿಕೊಳ್ಳುವುದಕ್ಕೆ ಒಂದು ಇಲಾಖೆ ಇದೆ. ಇದಕ್ಕೊಬ್ಬರು ಐಎಎಸ್ ಅಧಿಕಾರಿ ಮುಖ್ಯಸ್ಥರು.

ನಮ್ಮ ರಾಜ್ಯದಲ್ಲಿರುವ ಮಂದಿರಗಳ ಸಂಖ್ಯೆ, ಅವುಗಳ ವರ್ಗೀಕರಣದ ವಿವರಗಳು, ಅಲ್ಲಿರುವ ಅರ್ಚಕರ ಸಂಖ್ಯೆ, ಅವರಿಗೆ ನೀಡಲಾಗುತ್ತಿರುವ ವೇತನ ಇತ್ಯಾದಿ ವಿವರಗಳನ್ನು ಅಧ್ಯಯನ ಮಾಡಿದ ಒಂದು ವರದಿ ಸಾರ್ವಜನಿಕರ ಕೈಗೆ ಸಿಗುವಂತೆ ಆಗಬೇಕು. ಆಗ, ಈ ವಿಷಯದ ಹಲವು ಮಗ್ಗುಲುಗಳು ಜನರಿಗೆ ತಿಳಯುತ್ತವೆ.

ಮಂದಿರಗಳ ವಿಷಯಕ್ಕೆ ಸಂಬಂಧಿಸಿದ ಒಂದು ಮುಖ್ಯ ಪ್ರಶ್ನೆ ಎಂದರೆ, ಇಲ್ಲಿನ ಅರ್ಚಕರು ಬಹುತೇಕವಾಗಿ ಬ್ರಾಹ್ಮಣ ಜಾತಿಗೆ ಸೇರಿದವರು ಮತ್ತು ಪುರುಷರು. ಇದು ಇನ್ನೂ ಎಷ್ಟು ಕಾಲ ಮುಂದುವರೆಯಬೇಕು ಎಂಬುದು. ಈಗಿನ ವ್ಯವಸ್ಥೆಯನ್ನು ಪ್ರಜಾಪ್ರಭುತ್ವೀಕರಿಸುವ ಮೂಲಕ ಈ ಎರಡೂ ವಿಷಯಗಳಲ್ಲಿ ಆಗಿರುವ ಕೊರತೆಯನ್ನು ತುಂಬಿಕೊಳ್ಳಲು ಸಾಧ್ಯವಾಗುತ್ತದೆ. ಇದನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಿರುವುದು ಪ್ರಜಾಪ್ರಭುತ್ವವಾದಿಗಳ ಕರ್ತವ್ಯ.

ಈ ವಿಷಯದಲ್ಲಿ ಈಗ ನೆರೆರಾಜ್ಯ ತಮಿಳುನಾಡಿನಲ್ಲಿ ಸಂದೇಶ ಕಾಣುತ್ತಿದೆ. ಅಲ್ಲಿ ದೇವಸ್ಥಾನ ನಿರ್ವಹಣಾ ಇಲಾಖೆಯು ಇತ್ತೀಚೆಗೆ ಅರ್ಚಕರ ನೇಮಕಾತಿ ಮಾಡಿಕೊಳ್ಳುವಾಗ ಅರ್ಹರಾದ ಬ್ರಾಹ್ಮಣೇತರರನ್ನೂ ಪರಿಗಣಿಸಿ, ಆದೇಶ ನೀಡಿದೆ. ಸಾಂಪ್ರದಾಯಕ ಸಮಾಜದಲ್ಲಿ ಜೀವಸಂಚಾರವಾಗುವಂಥ ಬೆಳವಣಿಗೆ ಇದು.

ಈ ವಿಷಯವು 2015ರಲ್ಲಿ ಸುಪ್ರೀಂ ಕೋರ್ಟಿನ ಮುಂದೆ ಬಂದಿತ್ತು. 'ಸರ್ಕಾರಿ ವಲಯದಲ್ಲಿರುವ ಮಂದಿರಗಳಲ್ಲಿ ಯಾವುದೇ ಹುದ್ದೆಗೆ ನೇಮಕಾತಿ ಆಗುವಾಗ ಸಂವಿಧಾನ ತಿಳಿಸಿರುವಂತೆ ಎಲ್ಲ ಜನವರ್ಗಗಳಿಗೆ ಪ್ರಾತಿನಿಧ್ಯವನ್ನು ಕಡ್ಡಾಯವಾಗಿ ನೀಡತಕ್ಕದ್ದು' ಎಂದೇ ತೀರ್ಪು ಬಂದಿತು. ಕೇರಳದಲ್ಲಿ ಕೂಡ 2017ರಲ್ಲಿ 38 ಜನ ಅರ್ಹ ಬ್ರಾಹ್ಮಣೇತರರನ್ನು ಅರ್ಚಕರನ್ನಾಗಿ ನೇಮಿಸಲಾಗಿತ್ತು. ಇದು ಈಗ ಸಮಾನತಾ ಆಂದೋಲನದ ಭಾಗವಾಗಿ ಮುಂದುವರೆಯುವುದು ಅವಶ್ಯ.

● **ಮಂಗ್ಳೂರ ವಿಜಯ**

### ಅರ್ಚಕ ವೃತ್ತಿ: ಅಂಬೇಡ್ಕರ್ ನಿಲವು

ನನಗೆ ರೋಗಗ್ರಸ್ತ, ಅವೈಜ್ಞಾನಿಕ, ತಾರತಮ್ಯಪೂರಿತ ಧರ್ಮ ಬೇಡ. 'ಸಮಾಜದಲ್ಲಿ ಹಿತ ಪ್ರಸಾರ ಮಾಡುವ ಧ್ಯೇಯವನ್ನು ಹೊಂದಿರುವ ಧರ್ಮ' ಬೇಕು. ಧರ್ಮವು ಬಯಸುವ ವ್ಯವಸ್ಥೆಯಲ್ಲಿ ಪೌರೋಹಿತ್ಯಕ್ಕೆ ಪ್ರಾಧಾನ್ಯ ಇದೆ. ಧರ್ಮವು ಕೆಲವೊಂದು ತತ್ವಗಳನ್ನು ಆಧರಿಸಿರಬೇಕು. ಪ್ರಜಾಪ್ರಭುತ್ವ ಎಂಬುದು ಮುಖ್ಯವಾದ ತತ್ವಗಳಲ್ಲಿ ಒಂದು. ಇದನ್ನು ಒಪ್ಪಿಕೊಂಡರೆ, ಪೌರೋಹಿತ್ಯ ಎಂಬುದು ವೃತ್ತಿಯಾಗಿ ಪರಿಗಣನೆಯಾಗುತ್ತದೆ. ಸರ್ಕಾರದ ಅಧೀನದಲ್ಲಿರುವ ಎಲ್ಲಾ ವೃತ್ತಿಗಳಲ್ಲಿ ಇದೂ ಸೇರ್ಪಡೆ ಆಗಿ, ಇಲ್ಲಿನ ಅವಕಾಶಗಳನ್ನು ನೇಮಕಾತಿ ಮೂಲಕ ಪಡೆದುಕೊಳ್ಳುವುದು ಅನಿವಾರ್ಯವಾಗುತ್ತದೆ.

ಪೌರೋಹಿತ್ಯ ವೃತ್ತಿ ಪ್ರವೇಶಿಸುವುದಕ್ಕೆ ಅರ್ಹತೆ ನಿಗದಿಯಾಗಬೇಕು. ಅರ್ಹತೆಯನ್ನು ಪಡೆಯುವ ಅವಕಾಶಗಳನ್ನು ಸರ್ಕಾರ ಒದಗಿಸಬೇಕು. ಈ ಅವಕಾಶಗಳಲ್ಲಿ ಪ್ರಾತಿನಿಧ್ಯ ಇರಬೇಕು. ಅರ್ಹತೆ ಹೊಂದಿಲ್ಲದೆ ಪುರೋಹಿತರಾಗುವುದು ಕಾನೂನಿನ ಪ್ರಕಾರ ಅಪರಾಧ ಆಗಬೇಕು. ಅಪರಾಧಿಗಳಿಗೆ ಶಿಕ್ಷೆ ಆಗಬೇಕು.

ಇದು ನಿಜವಾದ ಅರ್ಥದಲ್ಲಿ ಕ್ರಾಂತಿಕಾರಿ ವಿಚಾರ ಏನಲ್ಲ. ಒಮ್ಮೆ ನಾವು ಸಂವಿಧಾನ, ಪ್ರಜಾಪ್ರಭುತ್ವ, ಪ್ರಾತಿನಿಧ್ಯ ಇತ್ಯಾದಿ ತತ್ವಗಳನ್ನು ಒಪ್ಪಿದ ಮೇಲೆ, ಈ ಪ್ರಕ್ರಿಯೆ ಅತ್ಯಂತ ಸಹಜವಾದುದಾಗಿ ಮನವರಿಕೆಯಾಗುತ್ತದೆ. ಜೊತೆಗೆ, ಈ ಪ್ರಕ್ರಿಯೆಯ ಮೂಲಕ ನಾವು 'ಹೊಸ ಬದುಕು' ರೂಪಿಸಿಕೊಳ್ಳುವುದು ಖಂಡಿತಕ್ಕೂ ಸಾಧ್ಯವಾಗುತ್ತದೆ.